ಮಾತು. ಆದರೆ, ಚಂದ್ರಾ ತನ್ನ ನಿರ್ಧಾರದಲ್ಲಿ ಗಟ್ಟಿಯಿದ್ದಳು. ಅವಳೂ ಅಮ್ಮನಿಗೆ ಹುಚ್ಚಿಯಂತೆ ಕಾಣುತ್ತಿರಬೇಕು. ನನಗೆ ನಗು ಬಂತು.

ಹೊಲದಲ್ಲಿ ಅಪ್ಪ ಆಳುಗಳೊಂದಿಗೆ ಕೆಲಸದಲ್ಲಿ ಬ್ಯುಸಿಯಿದ್ದ. ಅಲ್ಲಿ ನಿಲ್ಲಲು ಮನಸಾಗದೆ ಮರಳಿ ಬಂದರೆ ವಾರಿಜ ಬಾವಿ ಕಟ್ಟೆಯ ಬಳಿ ನಿಂತಿದ್ದಳು. 'ವಾರೀ, ನಿನ್ನ ಮದುವೆಯಂತೆ?'

'ಇನ್ನು ಎಷ್ಟು ದಿನಾ ಹೀಗೆ? ನಮಗೂ ಏನಾದ್ರೂ ಆಗಬೇಕಲ್ಲ' ಎಂದ ಅವಳ ದನಿ ನಿರ್ವಿಕಾರವಾಗಿತ್ತು.

'ಅಂದರೆ ನೀ ನಮ್ಮನ್ನೆಲ್ಲ ಬಿಟ್ಟು ಹೋಗತೀಯ?'

'ಅಂದ್ರೆ?'

'ಅಲ್ಲ ಕಣೇ ಮದುವೆಯಾದ ಮೇಲೆ ಗಂಡನ ಮನೆಗೆ ಹೋಗಬೇಕಲ್ಲ' ನಿಜಕ್ಕೂ ನನಗೆ ಬೇಸರವಾಗಿತ್ತು.

'ಇಲ್ಲ ರವೀ, ಅಮ್ಮ ಇಲ್ಲೇ ಇರೋಕೆ ಬರೋ ತರ ಹುಡುಗನ ಹುಡುಕ್ತಾ ಇದ್ದಾರೆ. ಈಗ ಅಪ್ಪನೂ ಇಲ್ವಲ್ಲ ಹಾಗಾಗಿ ಮದುವೆ ಆದ್ಮೇಲೆ ನಾವಿಬ್ರೂ ಇಲ್ಲೇ ತೋಟದ ಮನೇಲಿ ಉಳ್ಕೋಳ್ಳೋ ಥರ.' ನನಗೆ ಈ ಮಾತು ಕೇಳಿ ಎದೆ ಧಸಕ್ಕೆಂದಿತು. ಅಂದರೇನು? ವಾರಿಜ ಮದುವೆಯಾಗಿ ಬೇರೆ ಹೋದರೆ ಬೇಸರವಾಗುತ್ತದೆ ಎಂಬುದು ವಾಸ್ತವವೇ ಹಾಗಂತ ಅವಳು ಹೀಗೆ ಪರಂಪರೆ ಪರಂಪರೆಯಾಗಿ ನಮ್ಮ ತೋಟದಲ್ಲಿ ದುಡಿಯುತ್ತ ಇರಬೇಕೆ? ಬಹುಶಃ ವಾರಿಜಳ ಮದುವೆ ಇಷ್ಟು ದಿನ ತಳ್ಳಿಹೋಗಲು ಇದೂ ಒಂದು ಕಾರಣವಿರಬೇಕು. ಅಮ್ಮ ತೋಟಕ್ಕೆ ಸಮರ್ಥ ಆಳೊಬ್ಬನನ್ನ ಹುಡುಕ್ತಾ ಇದ್ದಾಳೆ. ವಾರಿಜ ಕತ್ತು ನೀಡಬೇಕು ಅಷ್ಟೇ. ಅಮ್ಮ ತುಂಬ ದುಷ್ಟಿ ಅನಿಸಿದಳು.

ನಾನು ನಸು ಬಗ್ಗಿ ನೀರು ಸೇದುತ್ತಿದ್ದ ಅವಳ ಮುಖವನ್ನು ನೋಡಿದೆ ಅವು ಎಂದಿನಂತೆ ಪ್ರಶಾಂತವಾಗೇ ಇದ್ದವು.

'ನಿನಗೇನೂ ಬೇಜಾರಿಲ್ವಾ ವಾರೀ?'

'ಎಂಥದ್ದೂ ಇಲ್ಲ, ನನ್ನನ್ನೇನು ಮಾಳಿಗೆ ಮನೆಯವನಾ ಮದ್ವೆ ಮಾಡ್ಕೊಂಡು ಹೋಗ್ತಾನೆ? ಬಂದರೂ ಯಾರೋ ಸಾಧಾರಣಕ್ಕೇ ಬರ್ತಾರೆ. ಅಲ್ಲಿ ಅವನ ಮನೆಗೆ ಕೆಲಸ ಮಾಡೋದಕ್ಕೇ ಇಲ್ಲೇ ಮಾಡಬಹುದಲ್ಲ? ಇದು ಒಗ್ಗಿರೋ ಜಾಗ, ಒಗ್ಗಿರೋ ಜನ, ನಂಗೂ ಇಲ್ಲೇ ಅಡುಗೆ ಕೆಲಸವೂ ಇದೆ, ಎಲ್ಲ ಒಳ್ಳೆದಕ್ಕೆ ತಾನೇ?'

ಸದಾ ವಿಷಯದ ಪಾಸಿಟಿವ್ ಸೈಡನ್ನೆ ನೋಡುವ ಹುಡುಗಿ ಅತ್ಯಂತ ಆಪ್ತವೆನಿಸಿದಳು.

ಆದರೂ ಕೆದಕಿದೆ– 'ಅದ್ಯಾಕೆ ಹಾಗಂತೀಯ ?ಯಾರಾದ್ರೂ ಮಾಳಿಗೆಯವನೇ ಬಂದರೆ?'

ವಾರಿಜ ಕುಲುಕುಲು ನಕ್ಕಳು. 'ಚೆನ್ನಾಗಿದೆ ಕಣೋ, ಕನಸು ಕಾಣೋಕೂ ಒಂದು ಮಿತಿ ಬೇಡ್ವೇ? ಸರಿ ಅದ್ರಲ್ಲೂ ತಪ್ಪಿಲ್ಲ ಬಿಡು. ಹಾಗೇನಾದ್ರೂ ಬಂದ್ರೆ ಒಳ್ಳೇದೆ ತಾನೇ' ಅವಳ ನಂಬಿಕೆ ನನ್ನನ್ನು ಬೆರಗುಗೊಳಿಸುತ್ತಿತ್ತು. ಹುಟ್ಟಿದಾಗಲೇ ಅಮ್ಮನನ್ನು ಕಳೆದುಕೊಂಡು, ಮಾವನ ಮನೆಯಲ್ಲೇ ಕೆಲಸಕ್ಕೆ ಉಳಿದು, ಪರ್ವಕಾಲಕ್ಕೆ ಅಪ್ಪನನ್ನೂ ಕಳೆದುಕೊಂಡು, ಅಕ್ಕರಾಸ್ತೆ ಕಾಣದ ಹುಡುಗಿ. ಅಂದಂತೆ ಅನಿಸಿಕೊಂಡು, ಮೈ ತುಂಬ ಕೆಲಸವೆಳೆದುಕೊಂಡು ಮಾಡುವ ವಾರಿಜಳೆಂಬ ಒಂಟಿ ಜೀವಕ್ಕೆ ಅದೆಷ್ಟು ನಂಬಿಕೆ. ಬದುಕು ಅವಳಿಗೆ ಅನ್ಯಾಯ ಮಾಡಿದೆ ಅಂತ ನನಗನಿಸಿದರೆ ಅವಳೀಗೇನೂ ಹಾಗನಿಸುತ್ತಿರಲಿಲ್ಲ. 'ಇರಲಿ ಬಿಡು ರವೀ,ಎಲ್ಲರಿಗೂ ಎಲ್ಲವೂ ಸಿಕ್ಕಿದರೆ ಯಾವುದಕ್ಕೆ ತಾನೇ ಬೆಲೆಯಿರುತ್ತದೆ?' ಅನ್ನುತ್ತ ನಕ್ಕುಬಿಡುವ ವಾರಿಜ ನನಗೆ ಸೋಜಿಗವಾಗೇ ಕಾಣುತ್ತಿದ್ದಳು.

ಅವತ್ತಿಡೀ ರಾತ್ರಿ ನನಗೆ ನಿದ್ರೆಯೇ ಬರಲಿಲ್ಲ. ಯಾಕೋ ವಾರಿಜ ಮತ್ತೆ ಮತ್ತೆ ನೆನಪಾದಳು.